# ಇಸ್ಲಾಮ್ ಮತ್ತು ಈಮಾನ್

«سأل جبريل عليه السلام رَسُولُ اللهِ صَلَّى اللهُ عَلَيْهِ وَسَلَّمَ - عن الإسلام فقال: «الْإِسْلَامُ أَنْ تَشْهَدَ أَنْ لَا إِلَهَ إِلَّا اللهُ وَأَنَّ مُحَمَّدًا رَسُولُ اللهِ صَلَّى اللهُ عَلَيْهِ وَسَلَّمَ، وَتُقِيمَ الصَّلَاةَ، وَتُؤْتِيَ الزَّكَاةَ، وَتَصُومَ رَمَضَانَ، وَتَحُجَّ الْبَيْتَ إِنِ اسْتَطَعْتَ إِلَيْهِ سَبِيلًا» ، قَالَ: صَدَقْتَ، قَالَ: فَعَجِبْنَا لَهُ يَسْأَلُهُ، وَيُصَدِّقُهُ، قَالَ: فَأَخْبِرْنِي عَنِ الْإِيمَانِ، قَالَ: «أَنْ تُؤْمِنَ بِاللهِ، وَمَلَائِكَتِهِ، وَكُتُبِهِ، وَرُسُلِهِ، وَالْيَوْمِ الْآخِرِ، وَتُؤْمِنَ بِالْقَدَرِ خَيْرِهِ وَشَرِّهِ»

ಒಮ್ಮೆ ಜಿಬ್ರೀಲರು(ಅ) ಪ್ರವಾದಿವರ್ಯರೊಡನೆ(ಸ) ಇಸ್ಲಾಮ್ ಏನೆಂದು ಕೇಳಿದರು. ಪ್ರವಾದಿವರ್ಯರು(ಸ) ಹೀಗೆ ಉತ್ತರಿಸಿದರು, "ಇಸ್ಲಾಮ್ ಎಂದರೆ ಅಲ್ಲಾಹನ ಹೊರತು ಅನ್ಯ ಆರಾಧ್ಯನಿಲ್ಲ ಮತ್ತು ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂಬುದಾಗಿ ಸಾಕ್ಷ್ಯ ವಹಿಸುವುದು, ನಮಾಝ್ ಸಂಸ್ಥಾಪಿಸುವುದು ಮತ್ತು ಝಕಾತ್ ನೀಡುವುದು, ರಮಝಾನಿನ ಉಪವಾಸ ವ್ರತವನ್ನಾಚರಿಸುವುದು ಮತ್ತು ದಾರಿವೆಚ್ಚದ ಸಾಮರ್ಥ್ಯವಿರುವವರು ಹಜ್ಜ್ ಯಾತ್ರೆ ಕೈಗೊಳ್ಳುವುದು." ಬಳಿಕ ಜಿಬ್ರೀಲ್(ಅ) ಕೇಳಿದರು, "ಈಮಾನ್ ಅಂದರೆ ಏನು?" ಪ್ರವಾದಿವರ್ಯರು(ಸ) ಇಂತೆಂದರು, "ಅಲ್ಲಾಹನ ಮೇಲೆ, ದೇವಚರರ ಮೇಲೆ, ಅಲ್ಲಾಹನ ಗ್ರಂಥಗಳ ಮೇಲೆ, ಅವನ ಸಂದೇಶವಾಹಕರ ಮೇಲೆ, ಪರಲೋಕದ ಮೇಲೆ ಮತ್ತು ದೇವವಿಧಿಯ ಮೇಲೆ ವಿಶ್ವಾಸ ತಾಳುವುದಾಗಿದೆ ಈಮಾನ್." (ಮುಸ್ಲಿಮ್)

ಅದೇ ರೀತಿ ಅಬ್ದುಲ್ ಕೈಸ್ ಗೋತ್ರದವರು ಮದೀನಕ್ಕೆ ಬಂದಾಗ ಪ್ರವಾದಿವರ್ಯರು(ಸ) ಅವರನ್ನು ಸ್ವಾಗತಿಸಿದರು ಮತ್ತು ಅವರಿಗೆ ಸತ್ಯವಿಶ್ವಾಸದ ಸಂದೇಶವನ್ನು ನೀಡಿದರು. ಬಳಿಕ ಹೀಗೆ ಕೇಳಿದರು,

«أَتَدْرُونَ مَا الإِيمَانُ بِاللَّهِ وَحْدَهُ» قَالُوا: اللَّهُ وَرَسُولُهُ أَعْلَمُ، قَالَ: «شَهَادَةُ أَنْ لاَ إِلَهَ إِلَّا اللَّهُ وَأَنَّ مُحَمَّدًا رَسُولُ اللَّهِ، وَإِقَامُ الصَّلاَةِ، وَإِيتَاءُ الزَّكَاةِ، وَصِيَامُ رَمَضَانَ، وَأَنْ تُعْطُوا مِنَ المَغْنَمِ الخُمُسَ»

‘‘ಅಲ್ಲಾಹನ ಮೇಲೆ ವಿಶ್ವಾಸ ಇರಿಸುವುದರ ಅರ್ಥವೇನೆಂದು ನಿಮಗೆ ತಿಳಿದಿದೆಯೇ?" ಅವರು ಹೇಳಿದರು, "ಅಲ್ಲಾಹ್ ಮತ್ತು ಅವನ ಸಂದೇಶವಾಹಕರೇ(ಸ) ಚೆನ್ನಾಗಿ ಬಲ್ಲರು." ಆಗ ಪ್ರವಾದಿವರ್ಯರು(ಸ) ಈ ರೀತಿ ಹೇಳಿದರು, "ಅಲ್ಲಾಹನಲ್ಲದೆ ಅನ್ಯ ಆರಾಧ್ಯರಿಲ್ಲ ಮತ್ತು ಮುಹಮ್ಮದ್ ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂದು ಸಾಕ್ಷ್ಯ ವಹಿಸುವುದು, ನಮಾಝ್ ನಿರ್ವಹಿಸುವುದು, ಝಕಾತ್ ನೀಡುವುದು, ರಮಝಾನಿನಲ್ಲಿ ಉಪವಾಸ ವ್ರತ ಆಚರಿಸುವುದು ಹಾಗೂ ಸಮರಾರ್ಜಿತ ಸೊತ್ತಿನಿಂದ ಐದನೆಯ ಒಂದಂಶವನ್ನು ನೀಡುವುದು." (ಮುತ್ತಫಕ್ ಅಲೈಹಿ)

ಈ ಹದೀಸ್‌ನಲ್ಲಿ ಪ್ರವಾದಿವರ್ಯರು(ಸ) ಈಮಾನನ್ನು ಇಸ್ಲಾಮಿನ ಆಧಾರದಲ್ಲಿ ತಿಳಿಸಿದರು. ಒಂದರ್ಥದಲ್ಲಿ, ಇಸ್ಲಾಮನ್ನು ಈಮಾನಿನ ಜತೆಯಲ್ಲಿ ತಿಳಿಯಬೇಕಾದರೆ, ಇಸ್ಲಾಮ್ ಎಂದರೆ ಬಾಹ್ಯ ಆರಾಧನೆಗಳಾದ ನಮಾಝ್, ಉಪವಾಸ ವ್ರತ, ಝಕಾತ್ ಮತ್ತು ಹಜ್ಜ್ ಗಳಾಗಿವೆ; ಅಂತೆಯೇ ಈಮಾನ್ ಎಂದರೆ ಅಲ್ಲಾಹನ ಮೇಲೆ ಮನಸಾರೆ ವಿಶ್ವಾಸವಿರಿಸುವುದು ಮತ್ತು ದೇವಚರರು, ದೇವಗ್ರಂಥಗಳು, ದೇವಸಂದೇಶವಾಹಕರು ಮತ್ತು ದೇವವಿಧಿ ಇತ್ಯಾದಿಗಳ ಮೇಲೆ ಮನಸಾರೆ ವಿಶ್ವಾಸ ತಾಳುವುದಾಗಿದೆ. ಕೇವಲ ಈಮಾನಿನ ಪ್ರಸ್ತಾಪ

ಬರುವೆಡೆ, ಅದರಲ್ಲಿ ಇಸ್ಲಾಮ್ ಸ್ವಯಂ ಸೇರಿರುತ್ತದೆ. ಅದೇ ರೀತಿ ಕೇವಲ ಇಸ್ಲಾಮಿನ ಪ್ರಸ್ತಾಪ ಬರುವೆಡೆ ಈಮಾನ್ ಕೂಡ ಉಲ್ಲೇಖಗೊಳ್ಳುತ್ತದೆ. ಉದಾಹರಣೆಗೆ:

﴿ فَأَخْرَجْنَا مَن كَانَ فِيهَا مِنَ ٱلْمُؤْمِنِينَ ﴿٣٥﴾ فَمَا وَجَدْنَا فِيهَا غَيْرَ بَيْتٍ مِّنَ ٱلْمُسْلِمِينَ ﴿٣٦﴾ ﴾ الذاريات: ٣٥ - ٣٦

"ತರುವಾಯ ನಾವು ಆ ನಾಡಿನಲ್ಲಿದ್ದ ಸತ್ಯವಿಶ್ವಾಸಿ (ಮೂಮಿನ್) ಗಳನ್ನೆಲ್ಲ ಅಲ್ಲಿಂದ ಹೊರತೆಗೆದೆವು ಮತ್ತು ಅಲ್ಲಿ ನಾವು ಒಂದು ಮನೆಯ ಹೊರತು ಮುಸ್ಲಿಮರ ಬೇರಾವ ಮನೆಯನ್ನೂ ಕಾಣಲಿಲ್ಲ." (ಅದ್ದಾರಿಯಾತ್: 35-36)

* * * * *